ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 31–12–2019**

**ಸಂಖ್ಯೆ: 1/1**

# ಪತ್ರಿಕಾ ಪ್ರಕಟಣೆ

## ಆಕಾಶವಾಣಿಯ ಎಫ್.ಎಂ. ರೇನ್‌ಬೋ ವಾಹಿನಿಯಲ್ಲಿ ಪುಸ್ತಕ ಪರಿಚಯ ಕಾರ್ಯಕ್ರಮ

ಬೆಂಗಳೂರು, ಜನವರಿ 1 , (ಕರ್ನಾಟಕ ವಾರ್ತೆ)

ಕನ್ನಡ ಪುಸಡ್ತಕ ಪ್ರಾಧಿಕಾರವು ಯುವಜನರಲ್ಲಿ ಸಾಹಿತ್ಯಾಭಿರುಚಿಯನ್ನು ಹುಟ್ಟಿಸುವ ಸಲುವಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುತ್ತಿದೆ. ಪ್ರಸ್ತುತ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟವಾಗಿರುವ ಪುಸ್ತಕಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವ ಸಲುವಾಗಿ ಯೋಜನೆಯೊಂದನ್ನು ಹಮ್ಮಿಕೊಂಡಿದೆ.

ಈ ಯೋಜನೆಯಂತೆ ಆಕಾಶವಾಣಿಯಿಂದ ಪ್ರಸಾರವಾಗುವ ಎಫ್.ಎಂ. ರೇನ್‌ಬೋ ವಾಹಿನಿಯಲ್ಲಿ ದಿನಾಂಕ: 02–01–2019 ರಿಂದ ಪ್ರತಿ ಬುಧವಾರದಂದು 7–55 ಗಂಟೆಗೆ 5 ನಿಮಿಷಗಳ ಪುಸ್ತಕ ಪರಿಚಯ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕಗಳು ಮಾತ್ರವಲ್ಲದೆ ರಾಜ್ಯಾದ್ಯಂತ ಪ್ರಕಟವಾಗಿರುವ ಪುಸ್ತಕಗಳ ಪರಿಚಯವನ್ನು ಮಾಡಿಕೊಡಲು ಯೋಜಿಸಲಾಗಿದೆ.

ಪ್ರತಿವಾರ 05 ನಿಮಿಷಗಳ ಕಾಲ ಪ್ರಸಾರವಾಗುವ ಈ ಕಾರ್ಯಕ್ರಮದಲ್ಲಿ ಪುಸ್ತಕ ಶೀರ್ಷಿಕೆ–ಲೇಖಕರ ಹೆಸರು ಅಥಾವ ಸಂಪಾದಕರ ಹೆಸರು – ಪ್ರಕಾಶನ ಸಂಸ್ಥೆ – ಪ್ರಕಟವಾದ ವರ್ಷ – ಪುಸ್ತಕದ ಬೆಲೆ – ನೀಡಿರಬಹುದಾದ ರಿಯಾಯಿತಿ – ಪುಸ್ತಕ ಸಂಖ್ಯೆ ಮತ್ತು ಕನಿಷ್ಠ ಎರಡರಿಂದ ಮೂರು ಸಾಲುಗಳ ಸಾರಾಂಶವನ್ನು ಒಳಗೊಂಡಂತೆ ಪ್ರಸಾರವಾಗುವಂತೆ ಕ್ರಮಕೈಗೊಳ್ಳಲಾಗಿದೆ. ಪುಸ್ತಕಾಸಕ್ತರು ಎಫ್.ಎಂ. ರೇನ್‌ಬೋ ವಾಹಿನಿಯಲ್ಲಿ ಈ ಕಾರ್ಯಕ್ರಮವನ್ನು ಕೇಳಿ ಪುಸ್ತಕಗಳನ್ನು ಖರೀದಿಸಲು ಅನುಕೂಲವಾಗುವುದು ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 2/2**

# ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ವಿತರಿಸುತ್ತಿರುವ ವಿವಿಧ ಪ್ರಮಾಣ ಪತ್ರಗಳ ಅರ್ಜಿ ಶುಲ್ಕದ ಮೊತ್ತ ಪರಿಷ್ಕರಣೆ

ಬೆಂಗಳೂರು, ಜನವರಿ 1 , (ಕರ್ನಾಟಕ ವಾರ್ತೆ)

ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ವಿವಿಧ ಪ್ರಮಾಣ ಪತ್ರ, ಪಹಣಿ ಪತ್ರ ಮತ್ತು ಪಿಂಚಣಿ ಮಂಜೂರಾತಿ ಸೇರಿದಂತೆ ಒಟ್ಟು 52 ಸೇವೆಗಳನ್ನು ನೀಡಲಾಗುತ್ತಿದೆ. ವಿವಿಧ ಪ್ರಮಾಣ ಪತ್ರಗಳ ಸೇವೆಗೆ ನಿಗದಿಪಡಿಸಿರುವ ರೂ 15/– ನ್ನು ರೂ. 25/– ಕ್ಕೆ ಹಾಗೂ ಪಹಣಿ ಪತ್ರಿಕೆಗಳ ಶುಲ್ಕವನ್ನು ರೂ 10/– ರಿಂದ ರೂ 15/– ಕ್ಕೆ (4 ಪುಟಗಳವರೆಗಿನ ಪಹಣಿಗೆ ರೂ 15/– ಹಾಗೂ ಪ್ರತಿ ಹೆಚ್ಚುವರಿ ಪುಟಕ್ಕೆ ಪ್ರತಿ ಪುಟಕ್ಕೆ ರೂ 2/– ರಂತೆ (5ನೇ ಪುಟದ ನಂತರ) ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

ಸಾರ್ವಜನಿಕರಿಗೆ ಅಗತ್ಯವಿರುವ ಕಂದಾಯ ಇಲಾಖೆಯ ವಿವಿಧ ಸೇವೆಗಳನ್ನು ಹೋಬಳಿ ಮಟ್ಟದಲ್ಲಿ ಒದಗಿಸಲು ದಿನಾಂಕ: 25–12–2012 ರಿಂದ ಅಟಲ್‌ಜೀ ಜನಸ್ನೇಹಿ ಕೇಂದ್ರ ಯೋಜನೆಯನ್ನು ಪ್ರಾರಂಭಿಸಿ, ಹೋಬಳಿ ಮಟ್ಟದಲ್ಲಿ ಒಟ್ಟು 769 ಅಟಲ್‌ಜೀ ಜನಸ್ನೇಹಿ ಕೇಂದ್ರ ಮತ್ತು 122 ಹೆಚ್ಚುವರಿ ಫ್ರಂಟ್ ಆಫೀಸ್‌ಗಳನ್ನು ಪ್ರಾರಂಭಿಸಲಾಗಿದೆ.

2006 ರಲ್ಲಿ ಇ–ಆಡಳಿತ ಇಲಾಖೆಯು ಖಾಸಗಿ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸಿದ ನೆಮ್ಮದಿ ಯೋಜನೆಯನ್ನು 2012 ರಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ) ಯಿಂದ ಕಂದಾಯ ಇಲಾಖೆಗೆ ವರ್ಗಾಯಿಸಿ, ನೆಮ್ಮದಿ ಯೋಜನೆಯನ್ನು ಪುನಶ್ಚೇತನಗೊಳಿಸಲು ವಿವಿಧ ಪ್ರಮಾಣ ಪತ್ರಗಳಿಗೆ ರೂ 15/– ನ್ನು ನಿಗದಿಪಡಿಸಲಾಗಿದ್ದು, ಸದರಿ ರೂ 15/– ರ ಮೊತ್ತವು 2006 ರಿಂದ ಬದಲಾವಣೆಯಾಗಿರುವುದಿಲ್ಲ.

ಅದರಂತೆ, ಭೂಮಿ ಯೋಜನೆಯಡಿ ಗಣಕೀಕೃತ ದಾಖಲೆ ಮತ್ತು ಗಣಕೀಕೃತ ಪಹಣಿ ಪತ್ರಿಕೆಗಳನ್ನು ಪ್ರತಿ ಪಹಣಿ ಪತ್ರಿಕೆಗೆ ರೂ 10/– ರಂತೆ ನಗದಿಪಡಿಸಲಾಗಿರುತ್ತದೆ.

ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಗಣಕಯಂತ್ರ, ಪ್ರಿಂಟರ್, ಸ್ಕ್ಯಾನರ್, ಯುಪಿಎಸ್ ಹಾಗೂ ಇತರೆ ಹಾರ್ಡ್‌ವೇರ್ ಉಪಕರಣಗಳನ್ನು ಬಳಸಿ, ಅಂದಾಜು 1.1 ಕೋಟಿ ಜಾತಿ, ಆದಾಯ ಮತ್ತು ವಾಸಸ್ಥಳ ಪ್ರಮಾಣ ಪತ್ರಗಳನ್ನು ಪ್ರತಿ ವರ್ಷ ವಿತರಿಸಲಾಗುತ್ತಿದೆ.

ಪ್ರತಿ ಪಹಣಿ ಪತ್ರಿಕೆಗೆ ನಿಗದಿಪಡಿಸಿರುವ ರೂ 10/– ಮೊತ್ತದಲ್ಲಿ ಗಣಕಯಂತ್ರಗಳ ಹಾಗೂ ಅಂತರ್ಜಾಲ ನಿರ್ವಹಣೆ, ಭೂಮಿ ತಂತ್ರಾಂಶ ಅಭಿವೃದ್ಧಿಪಡಿಸುವುದು ಹಾಗೂ ನಿರ್ವಹಣೆಮತ್ತು ಸುಧಾರಣೆ ಮಾಡಲಾಗುತ್ತಿದ್ದು, ಪ್ರತಿವರ್ಷ 1.5 ಕೋಟಿ ಪಹಣಿ ಪತ್ರಿಕೆ ವಿತರಿಸಲಾಗುತ್ತಿದೆ.

ಪ್ರಸ್ತುತ, ಬಳಕೆದಾರರ ಶುಲ್ಕವನ್ನು ಆಧರಿಸಿ ಬರುವ ವಾರ್ಷಿಕ ಆದಾಯುವು ಅಟಲ್‌ಜೀ ಜನಸ್ನೇಯಿ ಕೇಂದ್ರ ಹಾಗೂ ಭೂಮಿ ಯೋಜನೆಯ ವ್ಯವಸ್ಥೆಯನ್ನು ನಡೆಸಲು ತಗಲುವ ವಾರ್ಷಿ ವೆಚ್ಚಕ್ಕಿಂತ ಕಡಿಮೆ ಇರುತ್ತದೆ.

ನಾಗರೀಕರಿಗೆ ಅಡೆ ತಡೆಯಿಲ್ಲದ ಹಾಗೂ ಸುಗಮವಾಗಿ ಸೇವೆಗಳನ್ನು ವಿತರಿಸಲು ಅಟಲ್‌ಜೀ ಜನಸ್ನೇಹಿ ಕೇಂದ್ರ ಮತ್ತು ಭೂಮಿ ಸೇವೆಯ ವಿತರಣಾ ಪದ್ದತಿಯ ಮೂಲ ಸೌಲಭ್ಯವನ್ನು ಕಾಲ ಕಾಲಕ್ಕೆ ನಿರ್ವಹಿಸಲು, ಅಭಿವೃದ್ಧಿಪಡಿಸಲು ಹಾಗೂ ಡೇಟಾ ಎಂಟ್ರಿ ಅಪರೇಟರ್‌ಗಳ ಕನಿಷ್ಠ ವೇತನ ದರವನ್ನು ಹೆಚ್ಚಿಸಲು ಬಳಕೆದಾರರ ಶುಲ್ಕ ಪರಿಷ್ಕರಣೆಯಿಂದ ಸಾಧ್ಯವಾಗುತ್ತದೆ.

ಯಾವುದೇ ನಾಗರೀಕರು ಸ್ವ–ಇಚ್ಛೆಯಿಂದ ಪ್ರಮಾಣ ಪತ್ರವನ್ನು ಅಂಚೆ ಅಥವಾ ಸ್ಪೀಡ್ ಪೋಸ್ಟ್ ಮೂಲಕ ಪಡೆಯಲು ಇಚ್ಚಿಸಿದರೆ ಅಂತಹ ಸೇವೆಗಳಿಗೂ ಸಹ ದರ ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ ಎಂದು ಕಂದಾಯ ಇಲಾಖೆ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 3/3**

## ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಬೆಂಗಳೂರು, ಜನವರಿ 1, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಅಯೋಗವು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ವಸತಿ ಶಾಲೆಗಳಲ್ಲಿನ ನಿಲಯ ಪಾಲಕರು 407+110 (ಹೈ.ಕ.) ಹುದ್ದೆಗಳಿಗೆ ಸಂಬಂಧಿಸಿದಂತೆ, ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ಅಂತರ್ಜಾಲದಲ್ಲಿ http://kpsc.kar.nic.in ಪ್ರಕಟಿಲಾಗಿದೆ.

ಮೂಲ ದಾಖಲೆಗಳ ಪರಿಶೀಲನಾ ಕಾರ್ಯವನ್ನು ಜನವರಿ 12 ರಿಂದ 29 ರವರೆಗೆ ನಿಗದಿಪಡಿಸಲಾಗಿದ್ದು, ಅರ್ಹ ಅಭ್ಯರ್ಥಿಗಳಿಗೆ ಸೂಚನಾ ಪತ್ರಗಳನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿರುತ್ತದೆ. ಸೂಚನಾ ಪತ್ರವು ಸರಿಯಾದ ಸಮಯದಲ್ಲಿ ತಲುಪದಿದ್ದಲ್ಲಿ, ಅರ್ಹ ಅಭ್ಯರ್ಥಿಗಳು ಅರ್ಹತಾ ಪಟ್ಟಿಯ ಪ್ರತಿಯನ್ನು ಪಡೆದು ನಿಗದಿತ ದಿನಾಂಕದಂದು, ಆಯೋಗದ ಕೇಂದ್ರ ಕಚೇರಿ, ಬೆಂಗಳೂರು, ಇಲ್ಲಿ ಹಾಜರಾಗತಕ್ಕದ್ದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 4/4**

## ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸದಸ್ಯರ ನೇಮಕಕ್ಕಾಗಿ ಅರ್ಜಿ ಆಹ್ವಾನ

**ಬೆಂಗಳೂರು, ಜನವರಿ 1, (ಕರ್ನಾಟಕ ವಾರ್ತೆ)**

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಆರು ಸದಸ್ಯರ ನೇಮಕಾತಿಗಾಗಿ ಅರ್ಹ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಶಿಕ್ಷಣ, ಮಕ್ಕಳ ಆರೋಗ್ಯ ರಕ್ಷಣೆ, ಮಕ್ಕಳ ಕಲ್ಯಾಣ ಅಥವಾ ಮಕ್ಕಳ ಅಭಿವೃದ್ಧಿ, ಬಾಲನ್ಯಾಯ ಅಥವಾ ನಿರ್ಲಕ್ಷಿಸಲ್ಪಟ್ಟ ಮಕ್ಕ ರಕ್ಷಣೆ ಅಥವಾ ಸೌಲಭ್ಯ ವಂಚಿತ ಕಟ್ಟಕಡೆಯ ಮಕ್ಕಳು ಅಥವಾ ವಿಕಲಚೇತನ ಮಕ್ಕಳು, ಬಾಲಕಾರ್ಮಿಕ ಪದ್ದತಿ ನಿರ್ಮೂಲನ ಅಥವಾ ಸಂದಿಗ್ಧ ಪರಿಸ್ಥಿತಿಯಲ್ಲಿರುವ ಮಕ್ಕಳು, ಮಕ್ಕಳ ಮನಃಶಾಸ್ತ್ರ ಅಥವಾ ಮನಃಶಾಸ್ತ್ರ ಅಥವಾ ಸಮಾಜ ಶಾಸ್ತ್ರ, ಮಕ್ಕಳ ಕಾನೂನುಗಳು ಈ ಕ್ಷೇತ್ರಗಳಲ್ಲಿ ಕನಿಷ್ಠ 5 ವರ್ಷ ಅನುಭವ ಹೊಂದಿರಬೇಕು.

ಸದರಿ ಆಯೋಗಕ್ಕೆ ಆರು ಸದಸ್ಯರನ್ನು (ಇಬ್ಬರು ಮಹಿಳಾ ಸದಸ್ಯರನ್ನು ಒಳಗೊಂಡಂತೆ) ರಾಜ್ಯ ಸರ್ಕಾರ ನೇಮಿಸಬೇಕಾಗಿದೆ. ಸದಸ್ಯರ ಅವದಿಯು 3 ವರ್ಷದಾಗಿದ್ದು, ಸದಸ್ಯರುಗಳ ಹುದ್ದೆಗೆ ಅರ್ಜಿ ಸಲ್ಲಿಸುವವರ ವಯೋಮಿತಿ 57 ವರ್ಷದೊಳಗಿರಬೇಕು.

ಆಸಕ್ತರು ನಿಗಧಿತ ನಮೂನೆಯನ್ನು ಭರ್ತಿಮಾಡಿ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, 1ನೇ ಮಹಡಿ, ಬೆಂಗಳೂರು ಇವರಿಗೆ ಸಲ್ಲಿಸಹುದಾಗಿರುತ್ತದೆ.

(ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಅಂತರ್‌ಜಾಲ http://www.dwcd.kar.nic. ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 5/5**

**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಹನ್ನೊಂದನೇ ಪ್ರಧಾನ ಸಮ್ಮೇಳನ**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಹನ್ನೊಂದನೇ ಪ್ರಧಾನ ಸಮ್ಮೇಳನವನ್ನು "**ಸಮಾನ ಒಳಿತಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಹೊಸ ಆಯಾಮಗಳು**" **(New Vistas in Science and Technology for Common Good)** ಎಂಬ ಕೇಂದ್ರ ವಿಷಯದಡಿ, ಬೆಂಗಳೂರಿನ ಜಯನಗರದಲ್ಲಿರುವ ಎನ್. ಎಂ. ಕೆ. ಆರ್. ವಿ. ಕಾಲೇಜಿನ **(NMKRV College)** ಸಹಯೋಗದೊಂದಿಗೆ ಎರಡು ದಿನಗಳ ಕಾಲ **2019ರ ಫೆಬ್ರವರಿ 1 ಮತ್ತು 2 ರಂದು** (ಶುಕ್ರವಾರ ಮತ್ತು ಶನಿವಾರ) ಆಯೋಜಿಸುತ್ತಿದೆ.

ಈ ಸಮ್ಮೇಳನದಲ್ಲಿ ಸಮ್ಮೇಳನದ ಪ್ರತಿನಿಧಿಗಳು ಭೌತ ಮತ್ತು ಗಣಿತ ವಿಜ್ಞಾನ; ರಸಾಯನ ಮತ್ತು ಜೀವ ವಿಜ್ಞಾನ; ಇಂಜಿನಿಯರಿಂಗ್ ಹಾಗೂ ಅಂತರ್ ಶಾಸ್ತ್ರೀಯ ವಿಜ್ಞಾನಗಳಿಗೆ ಸಂಬಂಧಿಸಿದ ಸಂಶೋಧನಾ ಪ್ರಾತ್ಯಕ್ಷಿಕೆಗಳನ್ನು **(Poster Presentation)** ಮಂಡಿಸಲು ಸಹ ಅವಕಾಶವನ್ನು ಕಲ್ಪಿಸಲಾಗಿದೆ. ತಜ್ಞ ಸಮಿತಿಯು ಆಯ್ಕೆ ಮಾಡಿದ ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳಿಗೆ ನಗದು ಬಹುಮಾನವನ್ನು ನೀಡಲಾಗುವುದು.

ಪ್ರತಿ ವಿಷಯದ **4 ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳಿಗೆ/ಮಾದರಿಗಳಿಗೆ ನಗದು ಬಹುಮಾನಗಳನ್ನು (ಪ್ರಥಮ – ರೂ. 15,000/–; ದ್ವಿತೀಯ – ರೂ. 10,000/– ಹಾಗೂ 2 ಸಮಾಧಾನಕರ ಬಹುಮಾನಗಳನ್ನು – ತಲಾ ರೂ. 5,000/–) ನೀಡಲಾಗುವುದು.**

ಸಮ್ಮೇಳನದ ಪ್ರತಿನಿಧಿಗಳಾಗಿ ನೋಂದಾಯಿಸಿಕೊಳ್ಳಲು ಹಾಗೂ ಸಂಶೋಧನಾ ಪ್ರಾತ್ಯಕ್ಷಿಕೆಗಳ ಸಾರಾಂಶವನ್ನು **ಸಲ್ಲಿಸಲು ದಿನಾಂಕ 19ನೇ ಜನವರಿ 2018 (ಶನಿವಾರ) ಕೊನೆಯ ದಿನವಾಗಿರುತ್ತದೆ.**

ಆಸಕ್ತರು ಅರ್ಜಿಯನ್ನು ಸಮುಚಿತ ಮಾರ್ಗದಲ್ಲಿ ಇಮೇಲ್ ಮೂಲಕ ಕಳುಹಿಸಬಹುದಾಗಿದೆ (nmkrv.ksta19@gmail.com). ಹೆಚ್ಚಿನ ವಿವರವನ್ನು ಅಕಾಡೆಮಿ ಅಥವಾ ಸಮ್ಮೇಳನದ ವೆಬ್‌ತಾಣಗಳಿಂದ (www.kstacademy.in/ www.kstaconference.com) ಪಡೆಯಬಹುದಾಗಿದೆ.

ಅಕಾಡೆಮಿಯ ಈ ಪ್ರಧಾನ ಸಮ್ಮೇಳನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿರುವ ಖ್ಯಾತ ವಿಜ್ಞಾನಿ ಹಾಗೂ ಮುಂಬೈಯಿನ ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸಂಸ್ಥೆಯ **(TIFR, Mumbai)** ನಿವೃತ್ತ ನಿರ್ದೇಶಕರಾದ **ಪದ್ಮಭೂಷಣ ಡಾ. ಬಿ. ವಿ. ಶ್ರೀಕಂಠನ್** ಅವರಿಗೆ **ಜೀವಮಾನ ಸಾಧನೆ ಪ್ರಶಸ್ತಿಯನ್ನು** ನೀಡಿ ಗೌರವಿಸಲಾಗುವುದು. ಪ್ರಶಸ್ತಿ ಪುರಸ್ಕೃತರಿಗೆ ರೂ. 1,00,000/–ಗಳ ನಗದು, ಚಿನ್ನದ ಪದಕ (ರೂ. 50,000/– ಮಿತಿಯೊಳಗಿ) ಮತ್ತು ಸನ್ಮಾನ ಪತ್ರವನ್ನು ನೀಡಿ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 6/6**

**ಬೆಂಗಳೂರು ಜಲಮಂಡಳಿ : ಜನವರಿ 2 ರಂದು ಸಕಾನಿಅ(ಕೇಂದ್ರ–1)**

**ಉಪವಿಭಾಗದಲ್ಲಿ ನೀರಿನ ಅದಾಲತ್**

ಬೆಂಗಳೂರು ಜಲಮಂಡಳಿಯು 02.01.2019 ರಂದು ಸಕಾನಿಅ(ಕೇಂದ್ರ–1) ಉಪವಿಭಾಗದಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ದಿನಾಂಕ: 02.01.2019 ರಂದು ಸಕಾನಿಅ(ಕೇಂದ್ರ–1) ಉಪವಿಭಾಗ ವ್ಯಾಪ್ತಿಗೆ ಬರುವ ಎಲ್.ಎಲ್.ಆರ್, ಚಿಕ್ಕಲಾಲ್ ಬಾಗ್, ಬನ್ನಪ್ಪ ಪಾರ್ಕ್, ಸುಧಾಮನಗರ–1 ಸೇವಾಠಾಣೆಗಳಿಗೆ ಸಂಬಂಧಿಸಿದ

ವಿವಾದಗಳನ್ನು ತುಳಸಿ ತೋಟ, ಚಿಕ್ಕಲಾಲ್ ಬಾಗ್ ಇಲ್ಲಿ ನಡೆಸಲಿದ್ದು ಸಮಸ್ಯೆಗಳನ್ನು ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ): 22945187. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಕೇಂದ್ರ-1) ಉಪವಿಭಾಗ: 22945188.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರುನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ ಬಳಸಿಕೊಳ್ಳ ಬಹುದಾಗಿದೆ.

**ಸಂಖ್ಯೆ: 7/7**

## BWSSB: Water Adalath in AEE(Central-1) sub division on January 2nd

BWSSB water Adalath is held on 02.01.2018 in AEE(Central-1) sub division from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

The disputes of consumers of LLR, Chikkalalbagh, Bannappa Park, Sudhamanagar-1, service station coming under AEE(Cental-1) sub division, will be discussed in detail & problems will be settled in the office of the Assistant Executive Engineer (Central-1) sub division, Tulasi Thota, Chikkalalbagh.

Details regarding the adalath can be obtained by the office of EE(Central) :22945187, or office of AEE (Central-1): 22945188.

For any problems regarding the water supply and all, publics can contact 24x7 call centre :22238888 helpline number:1916 & whats app no: 8762228888.

Public can utilize this adalath facilities to solve the problems regarding water supply.